CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 5
ಸಿ.ಡಬ್ಲ್ಯೂ ನಂಃ 9
ಸಾಕ್ಷಿಯನ್ನು ದಿನಾಂಕಃ 04-10-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶಂಕ್ರಪ್ಪ ಚೌಡ್ಕಿ |
| ತಂದೆಯ ಹೆಸರು | ಃ | ಶರಣಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಮೃತ ಮಂಜುಳಾಳ ಪರಿಚಯವಿತ್ತು. ದಿಃ 16-3-2016 ರಂದು ಚಾಸಾ 1 ರವರು ಕುರುಬನಾಳ- ಕಂದಕೂರು ರಸ್ತೆಯ ಪಕ್ಕ ಇರುವ ಗುಂಡಿಯಲ್ಲಿ ಮಹಿಳೆಯ ಸುಟ್ಟ ಶವ ಇರುತ್ತದೆ ಎಂಬ ವಿಚಾರ ತಿಳಿಸಿದರು. ಆ ಜಾಗಕ್ಕೆ ನಾನು, ಚಾಸಾ 1 ಮತ್ತು 10 ಆ ಜಾಗಕ್ಕೆ ಹೋಗಿ ನೋಡಿದಾಗ ಸುಟ್ಟ ಶವದ ಮೇಲೆ ಆಶಾ ಕಾರ್ಯಕರ್ತರು ಹಾಕಿಕೊಳ್ಳುವ ಗುಲಾಬಿ ಬಣ್ಣದ ಸಮವಸ್ತ್ರದ ಸ್ವಲ್ಪ ಸುಟ್ಟ ಸೀರೆ ಇತ್ತು. ಪಕ್ಕದಲ್ಲಿಯೇ ಸುಟ್ಟ ಪ್ಲಾಸ್ಟಿಕ್ ಚಾಪೆ ಸಹಾ ಇತ್ತು. ಪಕ್ಕದಲ್ಲಿ ನಮ್ಮೂರಿನ ಶಿವಪ್ಪ ಮತ್ತು ಮಂಜುಳಾಳ ಇವರ 2 ಪಾಸಪೋರ್ಟ ಫೋಟೋಗಳು ಸಹಾ ಅಲ್ಲಿ ಬಿದ್ದಿದ್ದವು. ದಿಃ 19-4-2016 ರಂದು ಪೊಲೀಸರು ನಮ್ಮನ್ನು ಪೊಲೀಸ ಠಾಣೆಗೆ ಕರೆಸಿ ನಮ್ಮ ಹೇಳಿಕೆಯನ್ನು ಪಡೆದುಕೊಂಡರು. 1 ಚಪ್ಪಲ್, ಫೋನನ್ನು ಪೊಲೀಸರು ನನಗೆ ತೋರಿಸಿದ್ದು ಅದು ಮೃತ ಮಂಜುಳಾದ್ದು ಎಂದು ತಿಳಿಸಿ ಈಗ ನ್ಯಾಯಾಲಯದಲ್ಲಿರುವ ಇಬ್ಬರು ಆರೋಪಿತರನ್ನು ಸಹಾ ಠಾಣೆಯಲ್ಲಿ ನನಗೆ ತೋರಿಸಿದರು.

2). 1 ನೇ ಆರೋಪಿತಳು ಆಶಾಕಾರ್ಯಕರ್ತೆಯಾಗಬೇಕಾಗಿದ್ದು ಅದನ್ನು ಮೃತ ಮಂಜುಳಾ ತಪ್ಪಿಸಿದ್ದಾಳೆ ಎಂದು ಮನಸ್ಸಿನಲ್ಲಿಟ್ಟುಕೊಂಡು ಕುಷ್ಟಗಿಯಲ್ಲಿರುವ ತನ್ನ ರೂಮಿಗೆ ಮಂಜುಳಾಳನ್ನು ಕರೆದುಕೊಂಡು ಹೋಗಿ ಸ್ಪೈಟ್ ತಂಪು ಪಾನೀಯದಲ್ಲಿ

ನಿದ್ದೆ ಮಾತ್ರೆ ಬೆರೆಸಿ ಕುಡಿಸಿದ ನಂತರ ಮಂಜುಳಾಳನ್ನು ಉಸಿರುಗಟ್ಟಿ ಸಾಯಿಸಿ 2 ನೇ ಆರೋಪಿಯನ್ನು ಕರೆಸಿ ಇಬ್ಬರೂ ಬೈಕನಲ್ಲಿ ಮಂಜುಳಾಳ ಶವವನ್ನು ಕುರುಬನಾಳ ರಸ್ತೆಯ ಪಕ್ಕದಲ್ಲಿ ಇರುವ ಗುಂಡಿಗೆ ಹಾಕಿ ಪೆಟ್ರೋಲ್ ಅಥವಾ ಸೀಮೆಎಣ್ಣೆ ಸುರಿದು ಶವವನ್ನು ಸುಟ್ಟಿರುತ್ತಾರೆ ಎಂಬ ವಿಚಾರವನ್ನು ಪೊಲೀಸರು ನನಗೆ ತಿಳಿಸಿದರು. 1 ಮತ್ತು 2 ನೇ ಆರೋಪಿತರ ಮಧ್ಯ ಅನೈತಿಕ ಸಂಬಂಧ ಇತ್ತು ಎಂಬ ವಿಚಾರವನ್ನು ಸಹಾ ಪೊಲೀಸರು ತಿಳಿಸಿದ್ದರು. ನಂತರ ನನ್ನ ಹೇಳಿಕೆಯನ್ನು ಸಹಾ ಪೊಲೀಸರು ದಾಖಲು ಮಾಡಿಕೊಂಡಿರುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ಮತ್ತು ಪೊಲೀಸ ಠಾಣೆಯಲ್ಲಿ ನಾನು ನೋಡಿದ ಫೊಟೋ ಹಾಗೂ ಇತರೆ ವಸ್ತುಗಳು ಮುದ್ದೆಮಾಲು-1 ರಿಂದ 6 ಆಗಿರುತ್ತವೆ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಿಂದ</u>

3). ನಾನು 9 ನೇ ತರಗತಿಯವರೆಗೆ ಓದಿದ್ದೇನೆ. ಚಾಸಾ 1, 3, 7, 8, 9, 11, 13 ರಿಂದ 15 ಮತ್ತು 19 ಒಂದೇ ಊರಿನವರು ಹಾಗೂ ಒಂದೇ ಸಮಾಜದವರಾಗಿರುತ್ತೇವೆ. ಚಾಸಾ 1 ನನಗೆ ವಿಚಾರವನ್ನು ಫೋನು ಮಾಡಿ ತಿಳಿಸಿದರು. ಅವರ ಮೋಬೈಲ ನಂಬರ ಈಗ ನೆನಪಿಲ್ಲ. ಬೆಳಿಗ್ಗೆ ಸುಮಾರು 10 ಗಂಟೆಗೆ ಫೋನು ಕರೆ ಬಂದಾಗ ನಾನೊಬ್ಬನೇ ಮನೆಯಲ್ಲಿ ಇದ್ದೆ ನಂತರ ವಿಷಯವನ್ನು ಚಾಸಾ 10 ರವರಿಗೆ ತಿಳಿಸಿದೆ. ನಮ್ಮೂರಿನಿಂದ ಸುಮಾರು 8-9 ಕಿ ಮೀ ದೂರದಲ್ಲಿ ಶವ ಬಿದ್ದಿತ್ತು. ನಾನು ಆ ಜಾಗಕ್ಕೆ ಹೋದಾಗ ಅಂದಾಜು ಎಷ್ಟು ಗಂಟೆಯಾಗಿತ್ತು ಗೊತ್ತಿಲ್ಲ. ಸುದ್ದಿ ತಿಳಿದ ನಂತರ ಒಂದು ತಾಸಿನೊಳಗೆ ಆ ಜಾಗಕ್ಕೆ ಬೈಕನಲ್ಲಿ ಹೋಗಿದ್ದೆ. ನಮ್ಮೂರಿನ ಸಂಗಪ್ಪ ಭಾವಿಕಟ್ಟಿ, ಕನಕಪ್ಪ ರಾಣಿ ಮತ್ತು ಕನಕಪ್ಪ ಹಳ್ಳದಮಾಳಿ ಎಲ್ಲರೂ ಸೇರಿ ಹೋದೆವು. ನಾವು ಆ ಸ್ಥಳಕ್ಕೆ ಹೋದಾಗ ತುಂಬಾ ಜನ ಸೇರಿದ್ದರು ಅವರು ನಮ್ಮೂರಿನವರಾಗಿರಲಿಲ್ಲ.

4). ಮೃತ ದೇಹ ಬಿದ್ದಿದ್ದ ಜಾಗದ ಚೆಕ್ಕಬಂದಿ ಗೊತ್ತು - ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ - ಎನ್ ಹೆಚ್ ರಸ್ತೆ, ದಕ್ಷಿಣಕ್ಕೆ - ಖಾಸಗಿ ಜಮೀನು, ಉತ್ತರಕ್ಕೆ - ಗೊತ್ತಿಲ್ಲ. ಮೃತ ದೇಹ ಗುರುತು ಸಿಗದ ಹಾಗೇ ಸುಟ್ಟಿತ್ತು. ಮೃತಳ ಸೀರೆ ಮತ್ತು ಫೊಟೋ ನೋಡಿದಾಗ ಮೃತ ದೇಹ ಮಂಜುಳಾದ್ದೆಂದು ಗೊತ್ತಾಯಿತು. ಮೃತದೇಹ ಸುಮಾರು 2 ಅಡಿ ಆಳದ ಗುಂಡಿಯಲ್ಲಿ ಇತ್ತು. ಮೃತದೇಹದಿಂದ ಸುಮಾರು 5-6 ಅಡಿ ದೂರದಲ್ಲಿ ಅಂದರೆ ಮೃತದೇಹದ ಬಲಗೈ ಕಡೆ 02 ಫೊಟೋಗಳು ಬಿದ್ದಿದ್ದವು. ಫೊಟೋಗಳು ಸುಸ್ಥಿತಿಯಲ್ಲಿದ್ದವು, ಸುಟ್ಟಿರಲಿಲ್ಲ.

ಮೃತದೇಹದ ಒಂದು ಅಡಿ ದೂರದಲ್ಲಿ ಸುಟ್ಟ ಚಾಪೆ ಬಿದ್ದಿತ್ತು. ಸೀರೆಯ ಯಾವ ಭಾಗ ಮೃತದೇಹದ ಮೇಲಿತ್ತು ಎಂದು ಹೇಳಲು ಬರುವುದಿಲ್ಲ. ಎಷ್ಟು ಪ್ರಮಾಣ ಅಥವಾ ಗಾತ್ರದ ಸೀರೆಯ ತುಂಡು ಮೃತದೇಹದ ಮೇಲೆ ಇತ್ತು ಎಂದು ಹೇಳಲು ಬರುವುದಿಲ್ಲ.

5). ಮೃತ ದೇಹ ಬಿದ್ದಿದ್ದ ಸ್ಥಳದಿಂದ ಕುಷ್ಟಗಿ ಪೊಲೀಸ ಠಾಣೆ ಸುಮಾರು 04 ಕಿ ಮೀ ಅಂತರದಲ್ಲಿತ್ತು. ಮೃತದೇಹ ಬಿದ್ದಿದ್ದ ಜಾಗದಲ್ಲೇ ಮೊದಲು ನನ್ನ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿಕೊಂಡರು. ಎಷ್ಟು ತಾಸು ನನ್ನ ಹೇಳಿಕೆಯನ್ನು ಮಾಡಿಕೊಂಡರು ಎಂದು ಈಗ ಹೇಳಲಾಗುವುದಿಲ್ಲ. ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ಪ್ರಾರಂಭಿಸಿದಾಗ ಸಮಯ ಎಷ್ಟಾಗಿತ್ತು ಎಂದು ಗೊತ್ತಿಲ್ಲ. ದಿಃ 19-4-2016 ರ ಹಿಂದೆ ನಾನು 2-3 ಬಾರಿ ಠಾಣೆಗೆ ಹೋಗಿದ್ದೆ ಆದರೆ ದಿನಾಂಕ ನೆನಪಿಲ್ಲ. ಆ ದಿನಾಂಕಗಳಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರಲಿಲ್ಲ. ಈ ಪ್ರಕರಣ ಅಲ್ಲದೇ ಬೇರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಠಾಣೆಗೆ ಹೋಗಿದ್ದೆ. ನಮ್ಮೂರಿನಲ್ಲಿ ಕೊಲೆ ಶಿವಪ್ಪ ಬಾಳಪ್ಪ ಉಪನಾಳರವರ ತಾಯಿಯ ಕೊಲೆ ಕೇಸಿನಲ್ಲಿ ನಾನು ಠಾಣೆಗೆ ಹೋಗಿದ್ದೆ ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ದಿಃ 19-4-2016 ರಂದು ಠಾಣೆಗೆ ಬರುವಂತೆ ಪೊಲೀಸರು ಲಿಖಿತ ನೋಟೀಸು ಕೊಟ್ಟಿರಲಿಲ್ಲ, ಫೋನಿನಲ್ಲಿ ತಿಳಿಸಿದ್ದರು. ಆ ದಿನ ನಾನು ಠಾಣೆಗೆ ಹೋದಾಗ ಬೆಳಿಗ್ಗೆ 10-30 ರಿಂದ 11 ಗಂಟೆಯಾಗಿತ್ತು. ಅಲ್ಲಿ ಒಂದು ತಾಸು ಇದ್ದೆ. ನನ್ನ ಜೊತೆ ಠಾಣೆಗೆ ಆ ದಿನ ಬೇರೆ ಯಾರೂ ಬಂದಿರಲಿಲ್ಲ.

6). ಘಟನೆಯ ಬಗ್ಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಆದರೆ 1 ನೇ ಆರೋಪಿಯೇ ಮಂಜುಳಾ ಇವರ ಕೊಲೆ ಮಾಡಿದ್ದಾಳೆ ಎಂದು ಅನುಮಾನ ಇತ್ತು ಮತ್ತು ಊರಿನಲ್ಲಿ ಅದೇ ರೀತಿ ಮಾತನಾಡಿಕೊಳ್ಳುತ್ತಿದ್ದರು. ಯಾವ ತಾರೀಖಿನಿಂದ 1 ನೇ ಆರೋಪಿತಳ ಮೇಲೆ ನನಗೆ ಸಂಶಯ ಇತ್ತು ಎಂದು ಹೇಳಲು ಬರುವುದಿಲ್ಲ. 1 ನೇ ಆರೋಪಿತಳ ಮೇಲೆ ಸಂಶಯ ಇದೆ ಎಂಬ ವಿಚಾರ ನಾನು ಪೊಲೀಸರಿಗೆ ತಿಳಿಸಿರಲಿಲ್ಲ. ನನಗೆ ಪೊಲೀಸರು ತೋರಿಸಿದ ಮೋಬೈಲ ಫೋನು ಯಾವ ಬಣ್ಣದ್ದು ಎಂದು ಗೊತ್ತಿಲ್ಲ ಆದರೆ ಅದು ಸಣ್ಣ ಫೋನು ಆಗಿರುತ್ತದೆ ಅದು ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಸದರಿ ಫೋನಿನಲ್ಲಿ ಸಿಮ್ ಕಾರ್ಡ ಇತ್ತೋ ಇಲ್ಲವೋ ನಾನು ನೋಡಲಿಲ್ಲ.

7). ಕಪ್ಪು ಬಣ್ಣದ ಚಪ್ಪಲಿಯನ್ನು ನನಗೆ ತೋರಿಸಿದ್ದರು ಅದರ ಮೇಲೆ ಡಿಜೈನ್

ಇತ್ತೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ಚಪ್ಪಲಿ ಮತ್ತು ಮೋಬೈಲನ್ನು ಮೃತಳ ತಂದೆ ಠಾಣೆಯಲ್ಲಿ ಗುರುತಿಸಿದ್ದರು. ಯಾವ ದಿನಾಂಕದಂದು ಆ ವಸ್ತುಗಳನ್ನು ಮೃತಳ ತಂದೆ ಗುರುತಿಸಿದ್ದರು ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಆರೋಪಿತರ ಮಧ್ಯ ಅನೈತಿಕ ಸಂಬಂಧ ಇದೆ ಎಂಬುದಾಗಿ ಊರಿನಲ್ಲಿ ಜನ ಮಾತನಾಡಿಕೊಳ್ಳುತ್ತಿದ್ದರು ಆದರೆ ನನಗೆ ಆ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. 2 ನೇ ಆರೋಪಿ ತಂದೆಯ ಹೆಸರು ನನಗೆ ಗೊತ್ತಿಲ್ಲ, ಆದರೆ ಆತ ಮದಲಗಟ್ಟಿ ಗ್ರಾಮದವನು. 2 ನೇ ಆರೋಪಿ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8). ನಾನು ಈ ದಿನ ಚಾಸಾ 7 ಸಂಗಪ್ಪ ಅಂದರೆ ಮೃತ ಮಂಜುಳಾಳ ಗಂಡನ ಜೊತೆ ಕೋರ್ಟಿಗೆ ಬಂದಿದ್ದೇನೆ. ಮಂಜುಳಾ ತನ್ನ ಫೋನಿನಲ್ಲಿ ಬೇರೆಯವರ ಜೊತೆ ಜಾಸ್ತಿ ಹೊತ್ತು ಮಾತನಾಡುತ್ತಿದ್ದಳು ಎಂಬ ವಿಚಾರದಲ್ಲಿ ಆಕೆ ಮತ್ತು ಆಕೆಯ ಗಂಡನ ಮಧ್ಯ ಹಲವಾರು ಬಾರಿ ಗಲಾಟೆಯಾಗಿದ್ದು ಮತ್ತು ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದ ವಿಚಾರ ನನಗೆ ಗೊತ್ತಿಲ್ಲ. ಆಕೆ ಮತ್ತು ಗಂಡನ ಮಧ್ಯ ಬಹಳ ಭಿನ್ನಾಭಿಪ್ರಾಯವಿದ್ದ ಕಾರಣ ಮಂಜುಳಾ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಗೊತ್ತಿದ್ದರೂ ಆಕೆಯ ಗಂಡನ ಮಾತು ಕೇಳಿ ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

9). ಮೃತದೇಹ ಬಿದ್ದಿದ್ದ ಜಾಗ ಅಥವಾ ಜಮೀನು ಯಾರಿಗೆ ಸೇರಿದ್ದೆಂದು ನನಗೆ ಗೊತ್ತಿಲ್ಲ. ಸ್ಪೈಟ್ ಬಾಟಲಿಗೆ ನಿದ್ದೆ ಮಾತ್ರೆ ಬೆರೆಸಿ ಮೃತಳಿಗೆ ಕುಡಿಸಿದ ನಂತರ ಆಕೆಯನ್ನು ಉಸಿರುಗಟ್ಟಿಸಿ ಸಾಯಿಸಲಾಯಿತು ಎಂದು ಪೊಲೀಸರು ಸೃಷ್ಟಿ ಮಾಡಿದ ಕಟ್ಟುಕತೆಗೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 19-4-2016 ರಂದು ಆರೋಪಿತರನ್ನು ಪೊಲೀಸರು ನಮಗೆ ಠಾಣೆಯಲ್ಲಿ ತೋರಿಸಿದ್ದರು. ಆಶಾ ಕಾರ್ಯಕರ್ತೆಯಾಗಬೇಕಾದರೆ ಕನಿಷ್ಟ ವಿದ್ಯಾಭ್ಯಾಸ 10 ನೇ ತರಗತಿ ಪಾಸಾಗಿರಬೇಕು ಎಂದರೆ ಈಗ ಇರಬಹುದು ಆದರೆ ಅವರು ಅರ್ಜಿ ಸಲ್ಲಿಸಿದಾಗ ಆ ಶರತ್ತು ಆಗ ಇರಲಿಲ್ಲ. 1 ನೇ ಆರೋಪಿ ಆಶಾ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ವಿಚಾರ ನನಗೆ ಗೊತ್ತಿತ್ತು, ಆದರೆ ಅರ್ಜಿಯನ್ನು ಖುದ್ದಾಗಿ ನೋಡಿರಲಿಲ್ಲ. ಆ ಅರ್ಜಿಯ ಜೊತೆ ಯಾವ ಯಾವ ದಾಖಲೆಗಳನ್ನು ಆಕೆ ಕೊಟ್ಟಿದ್ದಳು ಎಂದು ನಾನು ನೋಡಿರಲಿಲ್ಲ.

10). ನಾನು ಕೃತ್ಯ ನಡೆದ ಸ್ಥಳಕ್ಕೆ ಅಥವಾ ಠಾಣೆಗೆ ಹೋಗಿರಲಿಲ್ಲ, ಮೃತದೇಹ

ಅಥವಾ ಮುದ್ದೆಮಾಲುಗಳನ್ನು ನಾನು ನೋಡಿರಲಿಲ್ಲ ಮತ್ತು ಪೊಲೀಸರು ಆರೋಪಿತರನ್ನು ನನಗೆ ಠಾಣೆಯಲ್ಲಿ ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆ ಮಾತ್ರ ಕೊಟ್ಟಿದ್ದೇನೆ ಆದರೆ ಯಾವುದೇ ದಾಖಲೆಗೆ ಸಹಿ ಮಾಡಿರಲಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪೊಲೀಸರು ಸೃಷ್ಟಿ ಮಾಡಿರುವ ಕಟ್ಟುಕತೆಗೆ ನಾನು ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಂಜುಳಾ ಸಾವಿಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಆರೋಪಿ ಪರ ಶ್ರೀ ಬಿ ಕೆ ಡಿ ವಕೀಲರಿಂದ

11). 2 ನೇ ಆರೋಪಿಯ ತಂದೆ ಡಿಎಸ್ ಎಸ್ ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಉದ್ದೇಶಪೂರ್ವಕವಾಗಿ ನಾನು 2 ನೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಶಿವಪ್ಪರವರ ತಾಯಿಯ ಕೊಲೆ ಕೇಸಿನಲ್ಲಿ ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಿದ್ದು, ಆ ಘಟನೆಯ ಬಗ್ಗೆ ಏನೂ ಗೊತ್ತಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಕುಷ್ಟಗಿ ಪೊಲೀಸ ಠಾಣೆಯ ಪ್ರಕರಣಗಳಲ್ಲಿ ಖಾಯಂ ಸಾಕ್ಷಿದಾರನಾಗಿರುತ್ತೇನೆ ಎಂದರೆ ಸರಿಯಲ್ಲ.

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ